# ನಮ್ಮೂರ ಹಿರೇಮಠ.....

## ಮೊದಲ ಭಾಗ

## ಅಥ ತುಮಕೂರು ಉವಾಚ

‘‘ನನ್ನನ್ನು ‘‘ಅಂಡರ್-ಎಸ್ಟಿಮೇಟ್’’ ಮಾಡಬೇಡಿ.
ನಾನೀಗ ಮೊದಲಿನಂತಲ್ಲ. ನಾನೀಗ ತುಂಬ ಬದಲಾಗಿದ್ದೇನೆ.
ಕಾಲಕ್ಕೆ ತಕ್ಕಂತೆ ನಾನೀಗ ಬದಲಾವಣೆಯ ಪರ್ವ, ಮಹಾಪರ್ವಕ್ಕೆ ಮುಖಾಮುಖಿಯಾಗಿದ್ದೇನೆ.
ಈ ಹಿಂದಿನ ಹಾಗೆ ನಾನು ಈಗ ಬರೀ ಕಾಯಿ, ಕೊಬ್ಬರಿಯ ನಾಡಲ್ಲ.
ನನ್ನನ್ನು ‘‘ಕೊಬ್ಬರಿಯ ರಾಜಧಾನಿ’’ ಎಂದು ಕರೆಯುತ್ತಿದ್ದ ಕಾಲಕ್ಕೆ ನಾನು ಅಲ್ಪತೃಪ್ತನಾಗಿದೆ.
ಈಗ ನಾನು ಹಾಗಲ್ಲ. ಈಗ ನಾನು ಸರ್ವಾಂಗಸುಂದರ.
ಅದೊಂದು ಕಾಲವಿತ್ತು. ನನಗಾಗ ‘‘ಸೆಲ್ಫ್ ಐಡೆಂಟಿಟಿ’’ ಇರಲಿಲ್ಲ.
‘‘ಸೆಲ್ಫ್ ಐಡೆಂಟಿಟಿ’’ ಏನು ಬಂತು? ಸೆಲ್ಫ್ ಐಡೆಂಟಿಟಿ, ಅದಂತೂ ದೂರದ ಮಾತು.
ನನಗೆ ‘‘ಐಡೆಂಟಿಟಿ’’ಯೇ ಇರಲಿಲ್ಲ. ನಾನು ಸ್ವಮಾನ್ಯತೆ ಮತ್ತು ಸ್ವಾಭಿಮಾನದಿಂದ ಸಂಪೂರ್ಣವಾಗಿ ವಂಚಿತನಾಗಿದ್ದೆ. ನಾನು ಬೆಂಗಳೂರಿನ ‘‘ಬಗಲ್ ಕಾ ಬಚ್ಚಾ’’ ಆಗಿದ್ದೆ.
ಬೆಂಗಳೂರಿನಿಂದಾಗಿ ನಾನು ಗುರುತಿಸಲ್ಪಡುತ್ತಿದ್ದೆ;
ಹೊರತು ನನ್ನಿಂದಾಗಿ ನಾನು ಗುರುತಿಸಲ್ಪಡುತ್ತಿರಲಿಲ್ಲ. ನಾನು ಬೆಂಗಳೂರಿನ ದ್ವಾರಪಾಲಕನಾಗಿದ್ದೆ.
ಜನರು ನನ್ನನ್ನು ತಳ್ಳಿಕೊಂಡು ದಾಟಿಕೊಂಡು ಬೆಂಗಳೂರಿಗೆ ಹೋಗುತ್ತಿದ್ದರು.

ಆಗೆಲ್ಲ ಉತ್ತರ ಕರ್ನಾಟಕದಿಂದ ಬರುವ ಜನಗಳು ಬೆಂಗಳೂರಿಗೆ ಹೋಗುವಾಗ ‘‘ತುಮಕೂರು ಸಿಕ್ಕುತ್ತದೆ’’ ಎಂದು ಹೇಳುತ್ತಿದ್ದರು. ಈಗ ಹಾಗಿಲ್ಲ. ಈಗ ಅದೇ ಉತ್ತರ ಕರ್ನಾಟಕದ ಜನಗಳು ತುಮಕೂರನ್ನು ದಾಟಿಕೊಂಡು ನಾವು ಬೆಂಗಳೂರಿಗೆ ಹೋಗಬೇಕು; ಅಗಸ್ತ್ಯ ಮಹರ್ಷಿಗಳು ವಿಂಧ್ಯಾಚಲವನ್ನು ದಾಟಿಕೊಂಡು ಹೋದ ಹಾಗೆ’’ ಎಂದು ಹೇಳುತ್ತಿದ್ದಾರೆ.

ಆವಾಗ ನಾನು ಲೆಕ್ಕಕ್ಕೇ ಇರಲಿಲ್ಲ. ನಿಜಕ್ಕೂ ಹೇಳಬೇಕೆಂದರೆ,

ಆಗ ನನ್ನ ಪರಿಸ್ಥಿತಿ ಹೇಗಿತ್ತು ಎಂದರೆ, ನಾನು ಆಟಕ್ಕುಂಟು, ಲೆಕ್ಕಕ್ಕಿಲ್ಲ.

ನಾನು ಊಟವಲ್ಲ; ನಾನು ಬರೀ ಉಪ್ಪಿನಕಾಯಿ, ವ್ಯಂಜನವಷ್ಟೇ.

ನಂಜಿಕೊಳ್ಳುವವರು ನಂಜಿಕೊಳ್ಳಬಹುದು; ಬಿಡುವವರು ಬಿಡಬಹುದು.

ತುಂಬ ಸಮಯದವರೆಗೆ ಬೆಂಗಳೂರಿಗೆ ಹೋಗುವವರಿಗೆ ನಾನೊಂದು ‘‘ಸ್ಪ್ರಿಂಗ್ ಬೋರ್ಡ್’’ ಅಂದರೆ ಚಿಮ್ಮುಹಲಿಗೆ, ನೂಕುಮಣೆಯಾಗಿದ್ದೆ.

ಇವತ್ತು ಪರಿಸ್ಥಿತಿ ಹಾಗಿಲ್ಲ. ಇವತ್ತು ನಾನು ತುಂಬ ಬದಲಾಗಿದ್ದೇನೆ.

ಇವತ್ತು ನನ್ನನ್ನು ಯಾರೂ ಸಹ ಗಮನಬಾಹಿರವಾಗಿಸುವ ಹಾಗಿಲ್ಲ.

ಇವತ್ತು ಬೆಂಗಳೂರು ನನ್ನ ಮುಂದೆ ಬಂದು,

‘‘ಅಯ್ಯಾ ತುಮಕೂರೇ, ನಾನಾರು ಗೊತ್ತಾ? ನಾನು ಈ ರಾಜ್ಯದ ಕ್ಯಾಪಿಟಲ್ ಸಿಟಿ’’ ಎಂದು ತನ್ನ ಹೆಗಲುಪಟ್ಟಿಯನ್ನು ಸರಿಮಾಡಿಕೊಂಡು ಹೇಳಲು ಬಂದರೆ ನಾನೂ ಸಹ,

‘‘ಅಪ್ಪಾ ಬೆಂಗಳೂರು, ಗೊತ್ತು ಬಿಡು. ನಾನು ಸ್ಮಾರ್ಟ್ ಸಿಟಿ, ಗೊತ್ತಾ?’’ ಎಂದು ಹುಬ್ಬುಕುಣಿಸಿ ಗತ್ತಿನಿಂದ ಹೇಳಬಲ್ಲೆ.

‘‘ಡೋಂಟ್ ಇಗ್ನರ್ ಮಿ, ಐ ಯಾಮ್ ತುಮಕೂರು -

Don’t ignore me I am Tumkur" ಎಂದು ಹೇಳುವಷ್ಟು ತಾಕತ್ತು, ಜೋರು, ಜಬರು ಈಗ ನನ್ನಲ್ಲಿದೆ. ಅದೆಷ್ಟು ದಿನ ಅಂತ, ಕೀಳಿರಿಮೆಯಿಂದ ಬಾಳುವುದು? ಅದೆಷ್ಟು ದಿನ ಅಂತ ತಲೆ ತಗ್ಗಿಸಿ, ಮೈ ಕುಗ್ಗಿಸಿ ಬಾಳುವುದು?

ನಾನೀಗ ‘‘ಸ್ಮಾರ್ಟ್’’ ಆಗಿದ್ದೇನೆ’’ ಮತ್ತು ‘‘ನಾನೀಗ ಸ್ಮಾರ್ಟ್ ಸಿಟಿ’’ ಎಂದು ರಾಷ್ಟ್ರಮಟ್ಟದಲ್ಲಿ ದಾಖಲಾಗಿದ್ದೇನೆ.

ಈ ಮೊದಲು ನನ್ನನ್ನು ಬಿಟ್ಟು ಬೆಂಗಳೂರಿಗೆ ವಲಸೆಹೋಗುವವರು ಈಗ ಬೆಂಗಳೂರನ್ನು ಬಿಟ್ಟು ನನ್ನತ್ತ ವಲಸೆ ಬರುತ್ತಿದ್ದಾರೆ.

ಹಿಂದೊಮ್ಮೆ ಬೆಂಗಳೂರು ಜನಗಳ ‘‘ಫರ್ಸ್ಟ್ ಲವ್’’ ಮತ್ತು ‘‘ಪ್ರಯಾರಿಟಿ’’ ಆಗಿತ್ತು.

ಈಗ ನಾನು ಅಂದರೆ ತುಮಕೂರು ಜನಗಳ ‘‘ಫರ್ಸ್ಟ್ ಲವ್’’ & ‘‘ಪ್ರಯಾರಿಟಿ’’ ಆಗಿದ್ದೇನೆ.

ನನ್ನ ಇತಿಹಾಸವನ್ನು ಒಂದಷ್ಟು ಮೊಗಚಿ ನೋಡಿದರೆ ನನಗೇನೇ ‘‘ಅಯ್ಯೋ’’ ಅನಿಸುತ್ತದೆ.

ನನ್ನವರೇ ಅಂದರೆ ನನ್ನ ತುಮಕೂರಿಗರೇ ನನ್ನನ್ನು ‘‘ಅಂಡರ್‌ಎಸ್ಟಿಮೇಟ್’’ ಮಾಡುತ್ತಿದ್ದರು.

ನನ್ನ ಪರಿಸ್ಥಿತಿ ‘‘ತಾಯ ಮೊಲೆವಾಲು ನಂಜಾಗಿ ಕೊಲುವೊಡೆ ಇನ್ನಾರಿಗೆ ದೂರಲಿ?’’ ಎಂಬಂತಾಗಿತ್ತು!! ತುಮಕೂರಿನ ಶ್ರೀಮಂತರು ಮತ್ತು ತುಮಕೂರಿನ ಅನುಕೂಲಸ್ಥರು ಕಾಫಿ ಕುಡಿಯಲು ಬೆಂಗಳೂರಿಗೆ ಹೋಗುತ್ತಿದ್ದರು. ಇದಕ್ಕಿಂತ ಅವಮರ್ಯಾದೆ ಇನ್ನೊಂದಿದೆಯೆ?

‘‘ಉಳ್ಳವರು ಶಿವಾಲಯವ ಮಾಡುವರು. ನಾನೇನು ಮಾಡಲಿ ಬಡವನಯ್ಯ’’ ಎಂದು ಬಸವಣ್ಣನವರು ಕೇಳಿದ ಹಾಗೆ ನಾನೂ ಸಹ

‘‘ಉಳ್ಳವರು ಕಾಫಿ ಕುಡಿಯಲು ಬೆಂಗಳೂರಿಗೆ ಹೋಗುವರಯ್ಯ.

ನಾನೇನು ಮಾಡಲಿ ನಾನು ಬಡವನಯ್ಯ’’ ಎಂದು ಹೇಳಿಕೊಂಡಿದ್ದೆ.

ನನ್ನ ಪರಿಸ್ಥಿತಿ, ಬಾಹುಬಲಿಯ ಮುಂದೆ ನಿಂತ ವಾಮನನಂತಾಗಿತ್ತು. ಈಗ ಹಾಗಿಲ್ಲ.

‘‘ಬೆಂಗಳೂರು ಮತ್ತು ನಾನು ನೇಬರ್ಸ್’’.

ಅಸಲು ನನಗೆ ‘‘ನೇಬರ್‌ಸಿಟಿ’’ ಎಂಬ ಗೌರವ ಕೂಡ ಇರಲಿಲ್ಲ.

ನನ್ನಲ್ಲಿರುವವರು ಕೂಡ ‘‘ಲವ್ ದೈ ನೇಬರ್’’ ಎಂಬ ಕ್ರಿಸ್ತನ ಮಾತಿಗೆ ಮಾತಿಗೆ ಕಿವಿಕೊಟ್ಟು, ಕ್ರಿಸ್ತಪರಮಾತ್ಮನಿಗೆ ‘‘ಜೈ ಹೋ’’ ಹೇಳಿಕೊಂಡು ಬೆಂಗಳೂರಿಗೆ ಹೋಗುತ್ತಿದ್ದರು.

‘‘ದೊಡ್ಡ ಮರದ ಕೆಳಗಡೆ ಯಾವುದೇ ಗಿಡ ಬೆಳೆಯುವುದಿಲ್ಲ’’ ಎಂದು ಹೇಳುತ್ತಾರಲ್ಲ, ಹಾಗಾಗಿತ್ತು ನನ್ನ ಸ್ಥಿತಿ, ಪರಿಸ್ಥಿತಿ!! ಬೆಂಗಳೂರು ದೊಡ್ಡ ಮರ. ಅದರ ಮುಂದೆ ನಾನು ಅಣಬೆ. ನನಗೆ ಕವಡೆಯಷ್ಟು ಕೂಡ ಕಿಮ್ಮತ್ತಿರಲಿಲ್ಲ.

ಸಮಯ ಒಂದೇ ತರ ಇರೋದಿಲ್ಲ, ನೋಡಿ.

‘‘ಅತ್ತೆಗೊಂದು ಕಾಲವಾದರೆ ಸೊಸೆಗೊಂದು ಕಾಲ’’;

‘‘ಜುಟ್ಟು, ಜನಿವಾರಗಳಿಗೊಂದು ಕಾಲವಾದರೆ ಪಟ್ಟು, ಪನಿವಾರಗಳಿಗೊಂದು ಕಾಲ’’.

‘‘ಶ್ರೀ ರಾಮನಿಗೊಂದು ಕಾಲವಾದರೆ ಜೈ ಭೀಮನಿಗೊಂದು ಕಾಲ’’!!

ಕಾಲ ಮತ್ತು ಕಾಲದ ಕಟ್ಟಳೆಯ ಎದುರಿನಲ್ಲಿ ಎಲ್ಲರೂ ತಲೆಬಾಗಲೇಬೇಕು.

ಅವತ್ತು ನನ್ನಿಂದ ದೂರ ದೂರ ಓಡಿಹೋಗುತ್ತಿದ್ದವರು ಈಗ ನನ್ನತ್ತ ಓಡಿ, ಓಡೋಡಿ ಬರುತ್ತಿದ್ದಾರೆ. ಆಗ ನನ್ನಿಂದ ''ನಿರ್ಗಮನಾಯ ಚ'' ಎಂದು ಹೇಳಿಕೊಂಡಿದ್ದವರು ಈಗ ಪುನರಾಗಮನಾಯ ಚ'' ಹೇಳಿಕೊಂಡಿದ್ದಾರೆ.

ನಾನೀಗ ಮುಂದುವರಿದಿದ್ದೇನೆ.

ನಾನೀಗ ಧಾರ್ಮಿಕವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಸಮೃದ್ಧ ಮತ್ತು ಬಲಾಢ್ಯ.

ನಾನೀಗ ರಾಜಕೀಯವಾಗಿ ಸಮೃದ್ಧ.

ರಾಜ್ಯಕ್ಕೆ ಒಬ್ಬೊಬ್ಬರಲ್ಲ, ಇಬ್ಬಿಬ್ಬರೂ ಮಂತ್ರಿಗಳನ್ನು ಕೊಡುವಷ್ಟು ನಾನು ಬೆಳೆದಿದ್ದೇನೆ.

ಅಷ್ಟೆ ಏಕೆ, ಇಡೀ ರಾಜ್ಯವನ್ನು ನಿಯಂತ್ರಿಸುವ ಗೃಹಸಚಿವರನ್ನು ಕೊಡುವಷ್ಟು ನಾನೀಗ ರಾಜಕೀಯಾಗಿ ಸಮೃದ್ಧ. ರಾಜ್ಯದ ಗೃಹ ಇಲಾಖೆಯೇ ನನ್ನ ಕೈಯಲ್ಲಿದೆ. ನಾನೀಗ ಸಾಕ್ಷಾತ್ ಪರಮೇಶ್ವರ!! ನನಗೆ ಎಲ್ಲರೂ ''ಜೀ'' ಎನ್ನಲೇಬೇಕು.

ಯಾರಾದರೂ ಸರಿ, ನನ್ನ ಮುಂದೆ ''ಸಲಾಮು'' ಹೊಡೆಯಲೇಬೇಕು.

ನನ್ನ ರಾಜಕೀಯ ವ್ಯಾಪ್ತಿ, ವಿಸ್ತಾರ ಬರೀ ರಾಜ್ಯಕ್ಕಷ್ಟೇ ಸೀಮಿತವಾಗಿಲ್ಲ.

ನನ್ನ ರಾಜಕೀಯವನ್ನು ನಾನೀಗ ರಾಷ್ಟ್ರಮಟ್ಟಕ್ಕೆ ವಿಸ್ತರಿಸಿಕೊಂಡಿದ್ದೇನೆ.

ರಾಷ್ಟ್ರಸೇವೆಗೆ ಕೇಂದ್ರಸಚಿವರನ್ನು ಕೊಟ್ಟ ಖ್ಯಾತಿಯನ್ನು ನಾನು ನನ್ನದಾಗಿಸಿಕೊಂಡಿದ್ದಾನೆ.

ಈ ಮೊದಲು ರಾಷ್ಟ್ರಕ್ಕೆ ಸ್ಪೀಕರ್, ಡೆಪ್ಯೂಟಿ ಸ್ಪೀಕರ್, ಸಭಾಪತಿ, ಉಪಸಭಾಪತಿಗಳನ್ನು ಕೊಟ್ಟಿದ್ದ ನಾನು ಈಗ ಲೌಡ್‌ಸ್ಪೀಕರ್‌ನ್ನು ಕೊಟ್ಟಿದ್ದೇನೆ. ಜಿಲ್ಲೆಯಿಂದ ಕೇಂದ್ರಕ್ಕೊಬ್ಬ ಕೇಂದ್ರಸಚಿವರನ್ನು ಕೊಟ್ಟಿದ್ದೇನೆ. ಮೋದಿಯಂಥ ಪ್ರಭಾವೀ ಪ್ರಧಾನಮಂತ್ರಿಯ ಬಹುಮತದ ಹಾದಿಯನ್ನು ರಾಷ್ಟ್ರಮಟ್ಟದಲ್ಲಿ ಸುಲಭಗೊಳಿಸುವಲ್ಲಿ ನನ್ನದೂ ಪಾತ್ರವಿದೆ. ಅದನ್ನು ಗಮನಬಾಹಿರವಾಗಿಸುವ ಹಾಗಿಲ್ಲ, ಇದು ಕಾರಣ, ನನಗೆ ಕೇಂದ್ರ ಕೂಡ ಮಣೆಹಾಕಿದೆ.

ನಾನೀಗ ಶೈಕ್ಷಣಿಕಾಗಿ ಕೂಡ ತುಂಬ ಸಮೃದ್ಧ.

ಇವತ್ತು ನನ್ನಲ್ಲಿ ಎರಡೆರಡು ಮೆಡಿಕಲ್ ಕಾಲೇಜುಗಳಿವೆ. ರಾಷ್ಟ್ರಮಟ್ಟದಲ್ಲಿ ಪ್ರಸಿದ್ಧಿಯನ್ನು ಬಾಚಿಕೊಂಡ ಹತ್ತೆಂಟು ಎಂಜಿನಿಯರಿಂಗ್ ಕಾಲೇಜುಗಳಿವೆ.

ನನ್ನ ಹೆಸರಿನಲ್ಲಿಯೇ ಒಂದು ಬೃಹತ್ ತುಮಕೂರು ವಿಶ್ವವಿದ್ಯಾಲಯವಿದೆ.

ತುಮಕೂರು ವಿಶ್ವವಿದ್ಯಾಲಯ ದೇಶಾದ್ಯಂತ ಹೆಸರುಮಾಡಿದ ವಿಶ್ವವಿದ್ಯಾಲಯಗಳ ಪಟ್ಟಿಯಲ್ಲಿ ಮುಂಚೂಣಿಯಲ್ಲಿದೆ.

ನನ್ನಲ್ಲಿರುವ ಸ್ಕೂಲು, ಕಾಲೇಜುಗಳಿಗಂತೂ ಲೆಕ್ಕವೇ ಇಲ್ಲ.

ನನ್ನಲ್ಲಿನ ಗುಣಮಟ್ಟದ ಪಿ. ಯು. ಕಾಲೇಜ್‌ಗಳ ಭಂಡಾರವೇ ಇದೆ.

ನಾನು ಒಂದರ್ಥದಲ್ಲಿ ಪಿ. ಯು. ಕಾಲೇಜ್‌ಗಳ ''ಸೆಲೆಬ್ರಿಟಿ'' ಇದ್ದ ಹಾಗೆ.

ಅಷ್ಟು ಮಾತ್ರವಲ್ಲ, ನಾನೀಗ ''ಎಜ್ಯುಕೇಶನ್ ಹಬ್'' ಎಂಬ ಖ್ಯಾತಿಯನ್ನು ನನ್ನದಾಗಿಸಿಕೊಂಡಿದ್ದೇನೆ. ನನ್ನಲ್ಲಿ ಒಂದಕ್ಕಿಂತ ಒಂದು ದೊಡ್ಡದಾಗಿರುವ ಗ್ರಂಥಾಲಯ ಮತ್ತು ಡಿಜಿಟಲ್ ಲೈಬ್ರರಿಗಳಿವೆ

ಓದುವವರಿಗೆ ಮತ್ತು ಓದುಮನಸ್ಕರಿಗೆ ನಾನು ಜಗತ್ತನ್ನೇ ತಂದು ಅವರ ಮುಂದೆ ಇಡುತ್ತೇನೆ. ಕಲಿಕೆ, ಕಲಿಯುವಿಕೆ ಮತ್ತು ಕಲಿಸುವಿಕೆಗೆ ನಾನು ಯಾವಾಗಲೂ ಮುಕ್ತ, ಮುಕ್ತ.

ಜನಗಳು ನನ್ನನ್ನು ''ಶೈಕ್ಷಣಿಕ ಕಾಶಿ'' ಎಂದು ಕರೆಯುತ್ತಾರೆ.

“ಶಿಕ್ಷಣಕಾಶಿ” ಎಂಬ ಗೌರವಕ್ಕೆ ಪಾತ್ರವಾಗುವುದು ಅಷ್ಟೊಂದು ಸುಲಭದ ಮಾತಲ್ಲ.

ನನಗೀಗ ಅಂಥೊಂದು ಗೌರವ ಸಂದಾಯವಾಗಿದೆ.

ಈ ಮೊದಲು ನನ್ನಲ್ಲಿ ದೊಡ್ಡ ದೊಡ್ಡ ಆಸ್ಪತ್ರೆಗಳೇ ಇರಲಿಲ್ಲ.

ಎಲ್ಲಕ್ಕೂ “ಬೆಂಗಳೂರಾಯ ತಸ್ಮೈ ನಮಃ” ಎಂದು ಹೇಳಿಕೊಂಡಿರಬೇಕಿತ್ತು.

ಈಗ ನನ್ನಲ್ಲಿ ದೊಡ್ಡ ದೊಡ್ಡ ಹಾಸ್ಪಿಟಲ್‌ಗಳಿವೆ. ಆಧುನಿಕ ತಂತ್ರಜ್ಞಾನದಿಂದ ಕೂಡಿದ ಒಂದಕ್ಕೊಂದು ಮಿಗಿಲಾದ “ಸೂಪರ್ ಸ್ಪೆಶ್ಯಾಲಿಟಿ” ಆಸ್ಪತ್ರೆಗಳು ನನ್ನಲ್ಲಿವೆ.

ಅದೊಂದು ಕಾಲದಲ್ಲಿ, ಕಫ, ಕೆಮ್ಮಾದರೂ ಸರಿ, ವಾಂತಿಭೇದಿಯಾದರೂ ಸರಿ, ಬೆಂಗಳೂರಿನತ್ತ ಮುಖಮಾಡುತ್ತಿದ್ದ ಜನಗಳು ಈಗ ಬೆಂಗಳೂರಿನತ್ತ ತಿರುಗಿನೋಡುವ ಹಾಗಿಲ್ಲ.

ನಾನೀಗ ಬರೀ “ಬ್ರಾಡ್ ಸಿಟಿ” ಮಾತ್ರವಲ್ಲ; ನಾನೀಗ “ಅಬ್ರಾಡ್ ಸಿಟಿ” ಕೂಡ ಅಹುದು.

ಬೆಂಗಳೂರಿನ ಮನೆಮನೆಯಲ್ಲಿ ವಿದೇಶದಲ್ಲಿ ಓದುವ ಮಕ್ಕಳಿರುವ ಹಾಗೆ

ಈಗ ನನ್ನಲ್ಲೂ ಮನೆ-ಮನೆಯಲ್ಲಿ ವಿದೇಶದಲ್ಲಿ ಓದುವ ಮಕ್ಕಳಿದ್ದಾರೆ.

ಮನೆ ಬಿಟ್ಟು ಮನೆಗೆ ಹೋಗಿ ಕೇಳಿ.

ವಿದೇಶಗಳಲ್ಲಿ ಓದಿಕೊಂಡಿರುವ ಇಲ್ಲವೆ ಯೋಗ, ಉದ್ಯೋಗ ಮಾಡಿಕೊಂಡಿರುವ ಜನಗಳು ನಿಮಗೆ ತುಮಕೂರಲ್ಲಿ ಸಿಕ್ಕುತ್ತಾರೆ.

ಈ ಹಿಂದೆ ಬೆಂಗಳೂರಿನ ಮುಂದೆ ನಾನು ಕುಚೇಲನಂತಿದ್ದೆ.

ನನಗೆ ಯಾರೂ ಸಹ “ಕ್ಯಾರೇ” ಎನ್ನುತ್ತಿರಲಿಲ್ಲ. ಹಿಂದೊಮ್ಮೆ ನನಗೆ “ಕ್ಯಾಬೇ” ಎನ್ನದ ಜನಗಳ ಪಾಲಿಗೆ ನಾನೀಗ “ಕಾಬಾ” ಆಗಿದ್ದೇನೆ.

ಈಗ ನಾನು, ಬೆಂಗಳೂರಿನ ಹೆಗಲಿಗೆ ಹೆಗಲುಕೊಟ್ಟು ಮಾತನಾಡುವಷ್ಟು ಆರ್ಥಿಕವಾಗಿ ಅನುಕೂಲವಾಗಿದ್ದೇನೆ. ಬೆಂಗಳೂರಿಗೆ ನಾನು ಒಂದು ಬಾರಿ “ಶರಣು” ಹೇಳಿದರೆ ಬೆಂಗಳೂರು ನನಗೆ ಈಗ ಎರಡು ಬಾರಿ “ಶರಣು ಶರಣಾರ್ಥಿ” ಹೇಳುತ್ತದೆ.

ಉದ್ಯಮ ಹಾಗೂ ಕೈಗಾರಿಕಾ ಕ್ಷೇತ್ರದಲ್ಲಿ ನಾನು ದೊಡ್ಡ ಕಾರು, ಚಿಕ್ಕ ಕಾರು ಎಂದು ಕಾರುಗಳನ್ನು ತಯ್ಯಾರಿ ಮಾಡುವುದಕ್ಕೆ ಹೋಗದೆ ಆಕಾಶದಲ್ಲಿ ಹಾರಾಡುವ “ಕಾಪ್ಟರ್, ಹೆಲಿಕಾಪ್ಟರ್”ಗಳನ್ನು ನಿರ್ಮಾಣಮಾಡುವ ಬಹುದೊಡ್ಡ ಘಟಕವಾಗಿ ಬೆಳೆದಿದ್ದೇನೆ. ಈಗ ಕಾರೇನು ಬಿಡಿ, ನನಗೆ ಅವು ಲೆಕ್ಕಕ್ಕಿಲ್ಲ. ಅವನ್ನೆಲ್ಲ ಬಿಟ್ಹಾಕಿ. ಕಾರ್ ಎಲ್ಲ ಈಗ ನನ್ನ ಮುಂದೆ ಬೇಕಾರ್!! ನಾನೀಗ ದೇಶಕ್ಕೆ ಹೆಲಿಕಾಪ್ಟರ್‌ಗಳನ್ನೇ ತಯ್ಯಾರಿಸಿಕೊಡುತ್ತಿದ್ದೇನೆ.

ಇನ್ನು ಮಾಧ್ಯಮ ಕ್ಷೇತ್ರದಲ್ಲೂ ನಾನು ನನ್ನದೇ ಆದ ವಿಸ್ತಾರವನ್ನು ಹೊಂದಿದ್ದಾನೆ.

ಈ ಮೊದಲು ಒಂದೇ ಒಂದು ಚಾನೆಲ್ ಕೂಡ ಇಲ್ಲದ ನನ್ನಲ್ಲಿ ಈಗ ದಿನಕ್ಕೊಂದರಂತೆ ಹೊಸ ಹೊಸ ಚಾನೆಲ್ಲುಗಳು ಹುಟ್ಟಿಕೊಳ್ಳುತ್ತಲಿವೆ.

ಪತ್ರಿಕಾ ಕ್ಷೇತ್ರದಲ್ಲೂ ನಾನು ಭದ್ರ, ಸುಭದ್ರ ಮತ್ತು ವೀರಭದ್ರ.

ತುಮಕೂರು ಜಿಲ್ಲೆಯ ತುಂಬ ನೂರಾರು ಸುದ್ದಿಪತ್ರಿಕೆಗಳು ಸುದ್ದಿಮಾಡಿಕೊಂಡು, ಸದ್ದು ಮಾಡಿಕೊಂಡು ಅಬ್ಬರಿಸಿಕೊಂಡಿವೆ. ಮೊನ್ನೆ ತಾನೆ, ನನ್ನಲ್ಲಿ ರಾಜ್ಯಮಟ್ಟದ ಕಾರ್ಯನಿರತ ಪತ್ರಿಕಾಕರ್ತರ 39ನೇ ಸಮ್ಮೇಳನ ಕೂಡ ನಡೆದುಹೋಯಿತು. ರಾಜ್ಯದ ಪತ್ರಿಕಾರಂಗದ ಇತಿಹಾಸದಲ್ಲಿ ಅದೊಂದು ಅಪೂರ್ವ ದಾಖಲೆಯಾಗಿ ಪರಿಣಮಿಸಿತು.

ನಾನು ಸಾಂಸ್ಕೃತಿಕವಾಗಿ ಕೂಡ ತುಂಬ ಸಮೃದ್ಧ.

ಸಾಂಸ್ಕೃತಿಕವಾಗಿ “ನಾ ಮುಂದು, ತಾ ಮುಂದು” ಎಂದು ಬಂದವರೆಲ್ಲ ನನ್ನ ಹಿಂದೆ ಬಂದು ನಿಂತುಕೊಂಡಿದ್ದಾರೆ. ಸಾಂಸ್ಕೃತಿಕ ಕ್ಷೇತ್ರದಲ್ಲಿ ಅಮೇರಿಕಾದ ಹಾಗೆ ನಾನು ದೊಡ್ಡಣ್ಣ.

ನಾಟಕ, ರಂಗಭೂಮಿ, ಪೌರಾಣಿಕಗಳ ಮಾತು ಬಂತೆಂದರೆ

ನಾನೇ "ಕಿಂಗು" ಮತ್ತು ನಾನೇ ಸಾರ್ವಭೌಮ ಮತ್ತು ನಾನೇ ಸತ್ಯಹರಿಶ್ಚಂದ್ರ. ಯಜಮಾನ್ ಗುಬ್ಬಿ ವೀರಣ್ಣನವರ ಕಾಲದಲ್ಲಿ ಇಡೀ ಕರ್ನಾಟಕಕ್ಕೆ ಕಲಾವಿದರನ್ನು ತೇಯ್ದುಕೊಟ್ಟ ಕೀರ್ತಿ ನನ್ನದು. ರಾಜ್‌ಕುಮಾರ್, ನರಸಿಂಹರಾಜು...., ಇತ್ಯಾದಿ ಈ ಎಲ್ಲರೂ ನನ್ನ ಗರಡಿಯಲ್ಲಿಯೇ ಪಳಗಿದ ಕಲಾಪಟುಗಳು ಮತ್ತು ಅಭಿನಯಕ್ಷೇತ್ರದ ಧ್ರುವತಾರೆಗಳು.

ನಾನು ರಾಮಾಯಣ, ಸಂಪೂರ್ಣ ರಾಮಾಯಣ, ಮಹಾಭಾರತ, ಕುರುಕ್ಷೇತ್ರ ನಾಟಕಗಳ ಪಿತಾಮಹ ಮತ್ತು ಪಿತಾಶ್ರೀ. ಇವತ್ತಿನ ಭಾಷೆಯಲ್ಲಿ ಹೇಳಬೇಕೆಂದರೆ, ಇವೆಲ್ಲವುಗಳಲ್ಲಿ ನಾನೇ "ಬಿಗ್ ಬಾಸ್".

ಬರೀ ಅವತ್ತು ಮಾತ್ರವಲ್ಲ, ಇವತ್ತಿಗೂ ಕೂಡ ಗುಬ್ಬಿ ವೀರಣ್ಣ ಕಲಾಕ್ಷೇತ್ರದಲ್ಲಿ ಪ್ರತಿವಾರವೂ ಒಂದಲ್ಲ ಒಂದು, ಪೌರಾಣಿಕ ನಾಟಕದ ಹಾರ್ಮೋನಿಯಂ ಶಬ್ದ ಕಲಾಭಿಮಾನಿಗಳ ಕರ್ಣಪಟಲವನ್ನು ಚುಂಬಿಸಿಕೊಂಡಿರುತ್ತದೆ.

ಗುಬ್ಬಿ ವೀರಣ್ಣ ಕಲಾಕ್ಷೇತ್ರ ದಿನನಿತ್ಯದಲ್ಲೂ ಒಂದಲ್ಲ ಒಂದು, ನಾಟಕಗಳ ತೆರೆ ಏರುವಿಕೆ ಮತ್ತು ಇಳಿಯುವಿಕೆಗೆ ಸಾಕ್ಷಿಯಾಗುತ್ತಲೇ ಇರುತ್ತದೆ.

ನನ್ನನ್ನು "ಕರ್ನಾಟಕದ ಕಲಾಕಾಶಿ" ಎಂದೂ "ರಂಗಭೂಮಿಯ ಸ್ವರ್ಗ" ಎಂದು ಕೂಡ ಕರೆಯುತ್ತಾರೆ. ರಂಗಭೂಮಿ ಕಲಾವಿದರಿಗೆ ನಾನು ತವರುಮನೆ ಇದ್ದ ಹಾಗೆ.

ಇವತ್ತು ನನ್ನಲ್ಲಿ ಏನಿಲ್ಲ? ಏನುಂಟು? ನನ್ನಲ್ಲಿ ಎಲ್ಲವೂ ಇದೆ.

ನಾನೀಗ ಬರೀ ತುಮಕೂರಲ್ಲ. ನಾನೀಗ ಶಿಕ್ಷಣಕಾಶಿ. ನಾನೀಗ ದಾಸೋಹಕಾಶಿ. ನಾನೀಗ ವಿದ್ಯಾರ್ಥಿಕಾಶಿ. ನಾನೀಗ ನಾಟಕಕಾಶಿ. ನಾನೀಗ ರಂಗಭೂಮಿಕಾಶಿ. ಕರುಣಾಮಯಿ ಜನಗಳು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ನನ್ನಲ್ಲಿರುವುದರಿಂದ ನಾನು ಕಾರುಣ್ಯಕಾಶಿ.

ಈ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ನಾನು ನಿಮಗೆ ಹೇಳಲೇಬೇಕು.

ಇಡೀ ಕರ್ನಾಟಕದ ತುಂಬೆಲ್ಲ

ಇವತ್ತಿಗೂ ತಟ್ಟೆ ಇಡ್ಲಿ, ರಾಗಿಮುದ್ದೆ, ರಾಗಿ ಬಿಸ್ಕೀಟ್‌ಗೆ ನಾನೇ ಹೆಸರುವಾಸಿ. ರಾಗಿಮುದ್ದೆ, ರಾಗಿ ಬಿಸ್ಕೀಟು ಮತ್ತು ತಟ್ಟೆ ಇಡ್ಲಿಯ ತವರುಮನೆ ನಾನು.

ನನಗೆ "ತಟ್ಟೆ ಇಡ್ಲಿಯ ತುಮಕೂರು" ಎಂಬ ಉಪನಾಮಧೇಯವಿದೆ.

ಬೆಂಗಳೂರಿಗೆ ಹೋಗುವ ಜನಗಳು ತಟ್ಟೆ ಇಡ್ಲಿಯನ್ನು ತಿನ್ನುವುದಕ್ಕಾಗಿ ಎಂದೇ ನನ್ನಲ್ಲಿ ಬಂದು ಬಸ್ಸು, ಕಾರು ಮತ್ತು ತಮ್ಮ ವಾಹನಗಳನ್ನು ನಿಲ್ಲಿಸುತ್ತಾರೆ. ತುಮಕೂರಿನ ತಟ್ಟೆ ಇಡ್ಲಿಯ ಖ್ಯಾತಿ ಆ ತಿರುಪತಿ ತಿಮ್ಮಪ್ಪನ ಲಾಡುವಿಗಿಂತ ಕಡಿಮೆ ಏನಲ್ಲ.

ರಾಗಿ ಮುದ್ದೆಗೆ ದೇವೇಗೌಡರು, ರಾಗಿ ಬಿಸ್ಕೀಟ್‌ಗೆ ನಾನು ತುಮಕೂರು ಹೆಸರುವಾಸಿ.

ರಾಗಿಮುದ್ದೆಯ ಊಟಕ್ಕೆ ದೇವೇಗೌಡರು ದೇಶದ ತುಂಬೆಲ್ಲ ಹೆಸರುವಾಸಿ.

ಅವರು ಪ್ರಧಾನಿಯಾಗಿದ್ದ ಕಾಲದಲ್ಲಿ ದೇಶದ ತುಂಬೆಲ್ಲ ರಾಗಿಮುದ್ದೆ ಸುದ್ದಿಮಾಡಿತು.

ಹಾಗೆಯೇ ರಾಗಿಬಿಸ್ಕಿಟ್‌ನ ತಯ್ಯಾರಿಕೆಯಲ್ಲಿ ತುಮಕೂರೇ ದೊಡ್ಡಣ್ಣ.

ಶ್ರೀ ಸಿ. ವಿ. ಮಹದೇವಯ್ಯನವರ ಶ್ರೀ ನಂಜುಂಡೇಶ್ವರ ಬೇಕರಿಯ ರಾಗಿಬಿಸ್ಕಿಟ್‌ನ "ಗಮಗಮ" ನಾಡಿನಾದ್ಯಂತ ತುಂಬಿಕೊಂಡಿದೆ.

ನನ್ನ ಸುತ್ತಮುತ್ತ ಬೆಟ್ಟ, ಪರ್ವತಗಳಿವೆ. ನಾನು ಬೆಟ್ಟ, ಪರ್ವತದ ಹಾಗೆ ಅಚಲ.

ನನ್ನಲ್ಲಿರುವ ಬೆಟ್ಟ, ಗುಡ್ಡಗಳು ನನ್ನ ಮನಸ್ಥಿತಿಯ ದೃಢತೆಯನ್ನು ಸಾರುತ್ತವೆ.

ಈ ಸಂದರ್ಭದಲ್ಲಿ, ನಾನು ನನ್ನ ಭೌಗೋಲಿಕದ ಬಗ್ಗೆ ಹೆಚ್ಚಿಗೆ ಹೇಳುವುದಿಲ್ಲ.

ಅದೆಲ್ಲ ನಿಮಗೆ ಗೊತ್ತೇ ಇದೆ. ಆ ಕುರಿತು ನಾನೇನೂ ಹೇಳಲ್ಲ.

ಆ ಕುರಿತು ನಾನು ಹೇಳಲೇಬೇಕು ಎಂದು ನೀವೆಲ್ಲ ಹೇಳುವುದೇ ಆದರೆ ಅದನ್ನು ನಾನು ಇನ್ನೊಂದು ಸಂದರ್ಭದಲ್ಲಿ ಹೇಳುತ್ತೇನೆ.

ನಾನೀಗ ನಿತ್ಯದಲ್ಲೂ ರಾಷ್ಟ್ರೀಯ ಮತ್ತು ಅಂತರ‍್ರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾಗುತ್ತಿದ್ದೇನೆ.

ಬೆಂಗಳೂರಿಗಿಂತಲೂ ಈಗ ಜನಮನಕ್ಕೆ ನಾನೇ ಹೆಚ್ಚು ‘‘ಡಾರ್ಲಿಂಗು’’.

ಬೆಂಗಳೂರು ಈಗ ಟ್ರಾಫಿಕ್‌ಸಿಟಿಯಾಗಿಬಿಟ್ಟಿದೆ. ಬೆಂಗಳೂರಿನ ಒಂದು ಬಡಾವಣೆಯಿಂದ ಇನ್ನೊಂದು ಬಡಾವಣೆಗೆ, ಒಂದು ಉಪನಗರದಿಂದ ಇನ್ನೊಂದು ಉಪನಗರಕ್ಕೆ ಹೋಗುವುದರಲ್ಲಿ ರಾಮಾಯಣದ ಯುದ್ಧಕಾಂಡ ಮತ್ತು ಮಹಾಭಾರತದ ಕುರುಕ್ಷೇತ್ರವಾಗುತ್ತದೆ.

ಬೆಂಗಳೂರೆಂದರೆ ಕಿರಿಕಿರಿ, ಕಿಷ್ಕಿಂಧೆ.

ಬೆಂಗಳೂರೆಂದರೆ ಸಾಕು, ಜನ ಈಗ ಮುಖವನ್ನು ಸಿಂಡರಿಸಿಕೊಳ್ಳುತ್ತಿದ್ದಾರೆ.

ಬೆಂಗಳೂರಿನ ಟ್ರಾಫಿಕ್ ಜಾಮು ಜನಗಳ ಸಹನೆಯ ಸೀಮೋಲ್ಲಂಘನ ಮಾಡಿದೆ.

ತುಮಕೂರಿನ ಜನಗಳಂತೂ ನಮಗೆ ‘‘ನಮ್ಮ ತುಮಕೂರೇ ಸಾಕು; ನಮಗೆ ನಮ್ಮ ತುಮಕೂರೇ ಸ್ವರ್ಗ’’ ಎಂಬ ಲೆಕ್ಕಕ್ಕೆ ಬಂದುಬಿಟ್ಟಿದ್ದಾರೆ.

ತುಮಕೂರಿನ ಜನಗಳಿಗೆ ನಾನೇ ಈಗ ‘‘ಮ್ಯಾಂಚೆಸ್ಟರ್’’;

ತುಮಕೂರಿನ ಜನಗಳಿಗೆ ನಾನೇ ಈಗ ‘‘ಲಾಸ್ ಏಂಜಲೀಸ್’’

12ನೇ ಶತಮಾನದ ವೈರಾಗ್ಯದ ತವನಿಧಿ ಅಕ್ಕಮಹಾದೇವಿ

ಅವತ್ತು ಶೂನ್ಯಸಿಂಹಾಸನಾಧೀಶ್ವರ ಅಲ್ಲಮರಿಗೆ,

‘‘ಭಾವಿಸಲು ನಾನು ಗಂಡುರೂಪ ನೋಡಾ’’ ಎಂದು ಹೇಳಿದ ಹಾಗೆ

ನಾನು ತುಮಕೂರು, ಈಗ ಎಲ್ಲರಿಗೂ

‘‘ಭಾವಿಸಲು ನಾನು ಬೆಂಗಳೂರು ನೋಡಾ’’ ಎಂದು ಹೇಳುತ್ತಿದ್ದೇನೆ.

ಹಿಂದೊಮ್ಮೆ ‘‘ಅಯ್ಯೋ ರಾಮ, ರಾಮ ರಾಮ’’ ಎಂದುಕೊಂಡಿದ್ದ ನಾನು

ತುಮಕೂರು ನಗರ, ರಾಷ್ಟ್ರಕವಿ ಕುವೆಂಪುರವರು ಹೇಳಿದ ಹಾಗೆ ನನ್ನ ಕಂಠವನ್ನು ಪಾಂಚಜನ್ಯವಾಗಿಸಿಕೊಂಡು ಎತ್ತರದ ಕಂಠದಲ್ಲಿ ‘‘ಹರಹರ ಮಹಾದೇವ; ಹರಹರ ಮಹಾದೇವ’’ ಎಂದು ಗುಡುಗಿಕೊಂಡಿದ್ದೇನೆ ಮತ್ತು ಹಾಗೆಂದು ಉಗ್ಘಡಿಸಿಕೊಂಡಿದ್ದೇನೆ.

**ಡಾ. ಶ್ರೀ ಶ್ರೀ ಶಿವಾನಂದ ಶಿವಾಚಾರ್ಯ ಶ್ರೀಗಳು**
**ಸುಕ್ಷೇತ್ರ ಹಿರೇಮಠ, ತಪೋವನ, ತುಮಕೂರು**